# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್.ಸಿ ನ್ಯಾಯಾಲಯ ಹಿರೇಕೆರೂರು

**ಸಿ ಸಿ ನಂ: 280 /2019**

ಸಿ .ಡಬ್ಲ್ಯೂ-03
ಪಿ .ಡಬ್ಲ್ಯೂ-03

| | | |
|---|---|---|
| ಹೆಸರು | : | ಮಹೇಶ |
| ತಂದೆ ಹೆಸರು | : | ಹೊಳಬಸನಗೌಡ ಪಾಟೀಲ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಗಂಗಾಪುರ |

ಇಂದು ದಿಃ **18-10-2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ಚಾಸಾ-2 ಪರಿಚಯ ಇರುತ್ತಾರೆ. ದಿಃ 07-07-2018 ರಂದು ಚಿಕ್ಕಮತ್ತೂರ ಗ್ರಾಮದ ಆಂಜನೇಯ ಹಾಗೂ ಮಾಸ್ತೇಮ್ಮ ದೇವಸ್ಥಾನಗಳಲ್ಲಿ ಹುಂಡಿ ಕಳ್ಳತನ ಆಗಿದ್ದರ ಕುರಿತು ಪಂಚನಾಮೆಯನ್ನು ನನ್ನ ಮತ್ತು ಚಾಸಾ-1, 2 ಹಾಗೂ 4 ರವರ ಸಮಕ್ಷಮ ಮಧ್ಯಾಹ್ನ 1-30 ರಿಂದ 2-30 ಗಂಟೆಯವರೆಗೆ ಮಾಡಿರುತ್ತಾರೆ. ನಂತರ ಗಂಗಾಪುರ ಗ್ರಾಮಕ್ಕೆ ಹೋಗಿರುತ್ತಾರೆ. ಗಂಗಾಪುರದಲ್ಲಿ ಕೊಡಿ ಕೆಂಚಮ್ಮ ಹಾಗುಾ ಆಂಜನೇಯ ದೇವಸ್ಥಾನದಲ್ಲಿ ಹುಂಡಿ ಕಳ್ಳತನ ಆಗಿದ್ದರ ಕುರಿತು ಪಂಚನಾಮೆಯನ್ನು ನನ್ನ, ಚಾಸಾ-1, 2 ಮತ್ತು 5 ರವರ ಸಮಕ್ಷಮ ಗುನ್ಹೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿ ಸದರಿ ಗುನ್ಹೆ ಸ್ಥಳದ ಪಂಚನಾಮೆಯನ್ನು ನೋಡಿ ಗುರುಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಫೋಟೋಗಳಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿರುತ್ತಾನೆ.

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಯು. ಬಿ. ಜೆ. ವಕೀಲರಿಂದಃ

ಪಂಚನಾಮೆಯಲ್ಲಿ ಪೋಲಿಸರು ಏನು ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಕಳ್ಳತನವಾದ ಬಗ್ಗೆ ನಮ್ಮ ಊರಿನವರು ಪಿರ್ಯಾದಿಯನ್ನು ಕೊಟ್ಟಿಲ್ಲ. ಪಂಚನಾಮೆಯನ್ನು ಬರೆದ ಪೋಲಿಸರ ಹೆಸರು ಗೊತ್ತಿರುವುದಿಲ್ಲ. ಪಂಚನಾಮೆಯನ್ನು ಹೀಗೆ ಬರೆಯಿರಿ ಎಂದು ನಾನು ಪೋಲಿಸರಿಗೆ ಹೇಳಿಲ್ಲ. ಯಾವ ತಾರೀಕಿನಂದು ಕಳ್ಳತನವಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಸದರಿ ದೇವಸ್ಥಾನಗಳಲ್ಲಿ ಕಳುವಾದ ಬಗ್ಗೆ ಪುರಾವೆಗಳು ಇದ್ದ ಬಗ್ಗೆ ಗೊತ್ತಿರುವುದಿಲ್ಲ. ಪಂಚನಾಮೆಗೆ ಚಿಕ್ಕಮತ್ತೂರಿನಲ್ಲಿ ಹಾಗೂ ಗಂಗಾಪುರ ಗ್ರಾಮಗಳಲ್ಲಿ ಸಹಿ ಮಾಡಿರುತ್ತೇನೆ. ಪೋಲಿಸರು ನಮ್ಮ ಊರಿಗೆ ಬಂದಿಲ್ಲ ಹಾಗೂ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ದೇವಸ್ಥಾನಕ್ಕೆ

ಸಿ .ಡಬ್ಲ್ಯೂ-03
ಪಿ .ಡಬ್ಲ್ಯೂ-03

ಹೋಗಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ  ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ  ಪಂಚನಾಮೆ ಮಾಡದೆ ಇದ್ದರು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 18-10-2021.

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು